ಸರ್ಕಾರದಿಂದ ಮಾನ್ಯತೆ ಪಡೆದಿರುವ ಎಸ್.ಸಿ.ಎಸ್.ಟಿ ಹಾಸ್ಟೆಲ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 420(258)

ಸದಸ್ಯರ ಹೆಸರು : ಶ್ರೀ ಮನೋಹರ್ ಪುನ್ನಪ್ಪ ಕಡೋಲ್‌ಕರ್(ಉಚ್ಚಗಾಂವ್)

ಉತ್ತರಿಸುವ ಸಚಿವರು : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ಬೆಳಗಾಂ ಜಿಲ್ಲೆಯಲ್ಲಿ ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುವ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ಹಾಗೂ ಪಾವತಿಸುವ ಸಂಬಳದ ವಿವರವನ್ನು ಒದಗಿಸಲು ಸೂಚಿಸುವುದೆ?

2) ಈ ವಿದ್ಯಾರ್ಥಿನಿಲಯಗಳಿಗೆ ಸರ್ಕಾರವು ನೀಡುತ್ತಿರುವ ಸಂಬಳ ಅಥವಾ ಅನುದಾನವೆಷ್ಟು?

3) ಸರ್ಕಾರವು ಮಾನ್ಯತೆ ಪಡೆದ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ವೇತನ ಯೋಜನೆಯನ್ನು ಮಂಜೂರು ಮಾಡಲಾಗುವುದೇ?

4) ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ನೀಡಬಹುದಾದ ಅನುದಾನವೆಷ್ಟು?

ಉತ್ತರ

1) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಬೆಳಗಾಂ ಜಿಲ್ಲೆಯಲ್ಲಿ ಖಾಸಗಿ ಸಂಸ್ಥೆಗಳಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ನಡೆಸಲ್ಪಡುವ 3 ಅನುದಾನಿತ ಮೆಟ್ರಿಕ್‌ಪೂರ್ವ ಹಾಗೂ ಪರಿಶಿಷ್ಟ ವರ್ಗಗಳ 2 ಅನುದಾನಿತ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡಲಾಗಿದೆ. ಈ ವಿದ್ಯಾರ್ಥಿನಿಲಯಗಳ ಸಿಬ್ಬಂದಿಗೆ ಸರ್ಕಾರವು ನಿಗಧಿಗೊಳಿಸಿರುವ ದರದಲ್ಲಿ ಗೌರವಧನವನ್ನು ಮಾತ್ರ ಪಾವತಿಸಲಾಗುತ್ತಿದೆ. ಅದರ ವಿವರ ಈ ಕೆಳಗಿನಂತಿದೆ:

1. ಮೇಲ್ವಿಚಾರಕಾರಿಗೆ – ತಿಂಗಳಿಗೆ ರೂ.125ರಂತೆ 12 ತಿಂಗಳುಗಳು
2. ಅಡಿಗೆಯವರಿಗೆ – ತಿಂಗಳಿಗೆ ರೂ.100ರಂತೆ 12 ತಿಂಗಳುಗಳು.
3. ಅಡಿಗೆ ಸಹಾಯಕರಿಗೆ – ತಿಂಗಳಿಗೆ ರೂ.75ರಂತೆ 12 ತಿಂಗಳುಗಳು.

ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಅನುದಾನಿತ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಇರುವುದಿಲ್ಲ.

2) ಅನುದಾನಿತ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಿಗೆ ಸಂಬಳವನ್ನು ನೀಡುತ್ತಿಲ್ಲ. ಆದರೆ ಸರ್ಕಾರದ ಆದೇಶ ಸಂಖ್ಯೆ SWL 248 SDC 77, ದಿನಾಂಕ: 20.12.1977ರನ್ವಯ ವಿದ್ಯಾರ್ಥಿನಿಲಯದ ನಿರ್ವಹಣೆ ಸಂಬಂಧ ಸಂಖ್ಯಾಬಲಕ್ಕನುಗುಣವಾಗಿ ವಸತಿದಾರರಿಗೆ ಭೋಜನ ವೆಚ್ಚವನ್ನು ಹಾಗೂ ಪಾದ್ಯುಚ್ಛಕ್ತಿ ವೆಚ್ಚವನ್ನು ಬಾಡಿಗೆ/ಸಿಬ್ಬಂದಿಗೆ ಗೌರವಧನವನ್ನು ಮಂಜೂರು ಮಾಡಲಾಗುತ್ತಿದೆ.

3) ಇಲ್ಲ.

4) ಮಾನ್ಯತೆ ಪಡೆದ ಖಾಸಗಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.350/-ರಂತೆ ಭೋಜನ ವೆಚ್ಚವನ್ನು ಮಂಜೂರು ಮಾಡಲಾಗುತ್ತಿದೆ.

ಶಿವಮೊಗ್ಗದಲ್ಲಿನ ಗಾಜನೂರಿನ ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರದ ಅವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 422(544)

ಸದಸ್ಯರ ಹೆಸರು : ಶ್ರೀ ಪಿ.ಸಿ.ಮೋಹನ್(ಚಿಕ್ಕಪೇಟೆ)

ಸಚಿವರ ಹೆಸರು-ಖಾದನಾಮ : ಶ್ರೀ ಎಂ.ಮಹಾದೇವ್(ರೇಷ್ಮೆ ಮತ್ತು ಜವಳಿ ಸಚಿವರು)

ಪ್ರಶ್ನೆ

ಅ. ಶಿವಮೊಗ್ಗದ ಗಾಜನೂರಿನಲ್ಲಿ ಇರುವ ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರ ಪ್ರಾರಂಭಗೊಂಡಿದ್ದು ಯಾವಾಗ? ಈ ಕೇಂದ್ರ ಈಗ ಅವಸಾನದ ಅಂಚಿನಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಇದು ಪ್ರಾರಂಭಗೊಂಡಾಗ ಬಿಚ್ಚಾಣಿಕೆ ಕೇಂದ್ರದಲ್ಲಿದ್ದ ಯಂತ್ರ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಇ. ಸಿಬ್ಬಂದಿಗಳ ಕೊರತೆ ಹಾಗೂ ಬಿಚ್ಚಾಣಿಕೆ ಯಂತ್ರಗಳು ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?